# ಹಿರಣ್ಯಕಶಿಪುವಿನ ಸಾವು!

■ ಗಣಪತಿ ಬಾಳೆಗದ್ದೆ

ವಿಷ್ಣು ವಿರೋಧಿ ಹಿರಣ್ಯಕಶಿಪುವಿನ
ಮುದ್ದಿನ ಕಂದ ಪ್ರಹ್ಲಾದ
ಅವನನು ಕಂಡರೆ ಏನೋ ಮೋದ
ಮನಸಿಗೆ ಒಂಥರಾ ಆಹ್ಲಾದ!

ದಾನವ ನಗರಿಯ ಯಾರೂ ಕೂಡ
ಶ್ರೀಹರಿ ಹೆಸರೇ ಹೇಳೊಲ್ಲ
ಹೇಳಿದ್ದಾದರೆ ಮುಗಿದೇ ಹೋಯ್ತು
ಕಶಿಪುವು ಅವರನು ಉಳಿಸೊಲ್ಲ!

ಆದರೂ ಎಳೆಯ ಪ್ರಹ್ಲಾದನಿಗೆ
ಶ್ರೀಹರಿ ಎಂದರೆ ಮಮಕಾರ
ಹಗಲೂ ಇರುಳೂ ಅವನದೆ ಧ್ಯಾನ
ಶ್ರೀಹರಿ ನಾಮದ ಉಚ್ಚಾರ!

ಕೇಳಿದ ತಂದೆಗೆ ಸಿಟ್ಟೋ ಸಿಟ್ಟು
ಕಂದಗೆ ಲತ್ತೆಯ ಹಾಕಿದನು
ಶ್ರೀಹರಿ ನಾಮವ ಹೇಳಲೆ ಕೂಡದು
ಎನ್ನುತ ಶಾಲೆಗೆ ಅಟ್ಟಿದನು!

ಏನೇ ಕಷ್ಟವ ಕೊಟ್ಟರು ಗುರುಗಳು
ಶ್ರೀಹರಿ ಮಂತ್ರವ ಬಿಡಲೊಲ್ಲ
ಹೊಡೆದರು ಬಡಿದರು ಕಾಲಲಿ ತುಳಿದರು
ಅಪ್ಪನ ಮಾತಿಗೆ ಬೆಲೆ ಇಲ್ಲ!


ರಕ್ಕಸ ಸಿಟ್ಟಿಗೆ ಬುದ್ಧಿಯ ಕೊಟ್ಟನು
ಕತ್ತಿಯ ತಂದನು ಒಂದು ದಿನ
ಈಗಲೆ ಶ್ರೀಹರಿ ತೋರಿಸದಿದ್ದರೆ
ಕೊಲ್ಲುವೆ ಎಂದನು ಕಂದಮನ!

ನನ್ನಲಿ ನಿನ್ನಲಿ ಎಲ್ಲಾ ಕಡೆಗೂ
ಪ್ರೀತಿಯ ಶ್ರೀಹರಿ ಇದ್ದಾನೆ
ನಂಬಿದ ಜನರಿಗೆ ಬಿಡುವುದೆ ಇಲ್ಲ
ರಕ್ಷಣೆ ಮಾಡಲು ಬರುತಾನೆ!

ಎನ್ನುವ ಕಂದನ ಮಾತನು ಕೇಳಿ
ರಕ್ಕಸ ಸೊಕ್ಕಲಿ ನಡುಗಿದನು
ಎದುರಿನ ಕಂಬಕೆ ರಪ್ಪನೆ ಗುದ್ದಿ
ದೇವರ ತೋರಿಸು ಹೇಳಿದನು!

ಕಂಬವು ಬಿರಿಯಿತು ಅರಮನೆ ನಡುಗಿತು
ದೇವರು ಕಂಬದ ಒಳಗಿಂದ
ಮನುಷ್ಯನಲ್ಲದ ಪ್ರಾಣಿಯೂ ಅಲ್ಲದ
ರೂಪವ ಧರಿಸಿ ಹೊರ ಬಂದ!

ಹಿರಣ್ಯಕಶಿಪುವ ತೊಡೆಯಲಿ ಮಲಗಿಸಿ
ಹೊಟ್ಟೆಯ ಹರಿದನು ಉಗುರಿಂದ
ಪುಟಾಣಿ ಕಂದಗೆ ರಾಜ್ಯವ ಕರುಣಿಸಿ
ಸಹಾಯ ಮಾಡಿದ ಗೋವಿಂದ!



## ಕುಂಚ ಪ್ರಪಂಚ





**ಎಂ. ಅದ್ವಿತಾ ರಾವ್**
8 ನೇ ತರಗತಿ
ಫ್ರೀಡಂ ಇಂಟರ್ನ್ಯಾಷನಲ್ ಸ್ಕೂಲ್
ಹೆಚ್.ಎಸ್. ಆರ್. ಲೇಔಟ್,
ಬೆಂಗಳೂರು.

## ಒಗಟು ಬಿಡಿಸಿ

1. ಗೂಡೊಳಗಿನ ಪಕ್ಷಿ ನಾಡೆಲ್ಲ ನೋಡುತ್ತದೆ.
2. ಸಾಗರ ಪುತ್ರ, ಸಾರಿನ ಮಿತ್ರ.
3. ಕಪ್ಪು ಕಂಬಳಿ ನೆಂಟ ಎಲ್ಲವನು ನಾಶ ಮಾಡೋಕೆ ಹೊಂಟ ನಾನ್ಯಾರು?
4. ಅಗಲವಾದ ಮಾಳಿಗೆಗೆ ಒಂದೇ ಕಂಬ.
5. ಗಿರ ಗಿರ ತಿರುಗುತ್ತೆ, ತಲೆ ತಿರುಗಿ ಬೀಳುತ್ತೆ.
6. ರಾತ್ರಿ ಎಲ್ಲ ವೀಣೆ ನುಡಿಸುವವ
7. ನೂರು ಮಕ್ಕಳಿಗೆ ಒಂದೇ ಉಡುದಾರ.
8. ಎಲೆ ಇಲ್ಲ, ಸುಣ್ಣ ಇಲ್ಲ, ಬಣ್ಣವಿಲ್ಲ ತುಟಿ ಕೆಂಪಾಗಿದೆ, ಮಳೆಯಿಲ್ಲ, ಬೆಳೆಯಿಲ್ಲ, ಮೈ ಹಸಿರಾಗಿದೆ.
9. ಕಾಲಿಲ್ಲದೇ ನಡೆಯುವುದು, ತಲೆ ಇಲ್ಲದೇ ನುಡಿಯುವುದು, ಮೇಲು ಕೆಳಗಾಗಿ ಓಡುವುದು.
10. ಸುದ್ದಿ ಸೂರಪ್ಪ ದೇಶವೆಲ್ಲಾ ಸುತ್ತಾಡ್ತಾನೆ ನಾನ್ಯಾರು?

**ಉತ್ತರ: 1.ಕಣ್ಣು, 2.ಉಪ್ಪು, 3. ಇಲಿ, 4.ಛತ್ರಿ, 5.ಬುಗುರಿ, 6.ಸೊಳ್ಳೆ, 7.ಪೊರಕೆ, 8.ಗಿಳಿ, 8.ನದಿ, 9.10.ಪತ್ರ**